ಶ್ರೀ ಅಲೂರು ಹನುಮಂತಪ್ಪ.—ನತ್ಯಮಂಗಲ ಟ್ಯಾಂಕ್ ರೆಸ್ಟೊರೇಷನ್ ಕೆಲಸ ಸುಮಾರು 59,700 ರೂಪಾಯಿಗಳು ಮತ್ತು ಅರೇಗುಜ್ಜನಹಳ್ಳಿ ಟ್ಯಾಂಕ್ ರೆಸ್ಟೊರೇಷನ್ ಕೆಲಸ ಸುಮಾರು 9,000 ಎನ್ನುವುದು.

ಶ್ರೀ ಕೆ. ಲಕ್ಕಪ್ಪ.—ನಮ್ಮ ಹಣಕಾಸಿನ ಸಚಿವರು, ಮರಾಮತ್ತು ಶಾಖಾ ಸಚಿವರು ಹಾಗೂ ಗೃಹ ಸಚಿವರು ನಮ್ಮ ತುಮಕೂರು ಜಿಲ್ಲೆಗೆ ಬಂದು ಇಲ್ಲಿ ಅಭಾವಕ್ಕೆ ಒಳಗಾಗಿರುವ ಪ್ರದೇಶಗಳಾವುವು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ಒಂದು ಪಟ್ಟಿಯನ್ನು ತಯಾರು ಮಾಡಿಕೊಂಡು ಸರಕಾರಕ್ಕೆ ಒದಗಿಸಿ ಇಲ್ಲಿಗೆ ಬೇಕಾಗುವ ಇರಿಗೇಷನ್ನು ಯೋಜನೆಗಳನ್ನೆಲ್ಲಾ ಮಂಜೂರು ಮಾಡುತ್ತೇವೆಂದು ಭರವಸೆ ಹೇಳಿ ಬಂದಿದ್ದರೂ ಕೂಡ ಇಲ್ಲಿ ಮಾನ್ಯ ಉಪಮಂತ್ರಿಗಳು ಉತ್ತರ ಕೊಡುವಾಗ ಪದೇ ಪದೇ ಯಾವ ಕೆಲಸಗಳನ್ನೂ ತೆಗೆದುಕೊಂಡು ಇಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಇತ್ತೀಚೆಗೆ ಮಾನ್ಯ ಹಣಕಾಸಿನ ಸಚಿವರು, ಮರಾಮತ್ತು ಸಚಿವರು ಹಾಗೂ ಗೃಹ ಸಚಿವರು ಪ್ರವಾಸ ಮಾಡಿಕೊಂಡು ತುಮಕೂರಿನಿಂದ ಬಂದ ಮೇಲೆ ಈ ತಾಲ್ಲೂಕಿಗೆ ಸಂಬಂಧಪಟ್ಟ ಕೆಲಸಗಳನ್ನೆಲ್ಲಾ ಪರಿಶೀಲನೆ ಮಾಡಿ ಸುಮಾರು 19 ಲಕ್ಷ ರೂಪಾಯಿಗಳ ಹೊಸ ಕೆಲಸಗಳನ್ನೂ ಈಗಾಗಲೇ ಮಾಡಲು ಸರಕಾರ ಮಂಜೂರಾತಿ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಲ್ಲಿ ಬರೀ ವಿರೋಧಪಕ್ಷದ ಸದಸ್ಯರುಗಳೇ ಇಲ್ಲಿಗೆ ಸದಸ್ಯರಾಗಿ ಆರಿಸಿ ಬಂದಿರುವುದರಿಂದ ನಮ್ಮ ತುಮಕೂರು ಜಿಲ್ಲೆಯ ಕೆಲಸಗಳೆಲ್ಲಾ ಸ್ಥಗಿತವಾಗುತ್ತಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಅಲೂರು ಹನುಮಂತಪ್ಪ.—ಸರಕಾರಕ್ಕೆ ಅಂತಹ ಯಾವ ಭಾವನೆಯೂ ಇಲ್ಲ. ಇದು ಮಾನ್ಯ ಸದಸ್ಯರ ತಪ್ಪು ಕಲ್ಪನೆ ಎಂದು ನಾನು ಹೇಳುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈಗ ಉಳಿದಿರುವ ಕೆಲಸ ಕಾರ್ಯಗಳನ್ನು ಪೂರ್ತಿ ಮಾಡಲು ಇನ್ನೂ ನಿಧಾನವಾಗುತ್ತಿದೆ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಅಲೂರು ಹನುಮಂತಪ್ಪ.—ಅನೇಕ ಕಡೆಗಳಲ್ಲಿ ಅಕ್ವಿಸಿಷನ್ನು ಕೇಸುಗಳಿವೆ ಮತ್ತೆ ಕೆಲವು ಕಡೆಗಳಲ್ಲಿ ಕಂಟ್ರಾಕ್ಟರುಗಳ ಅಭಾವದಿಂದಾಗಿ ನಿಧಾನವಾಗುತ್ತಿದೆ. ಈಗ ಆದಷ್ಟು ತ್ವರಿತವಾಗಿ ಇಲ್ಲಿನ ಕೆಲಸಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಕೆಲವು ಕೆಲಸಗಳು ಮುಗಿದಿವೆ. ಹೊಸ ಕೆಲಸಗಳಿಗೆಂದು ಸುಮಾರು 4·54 ಲಕ್ಷದಷ್ಟು ಹಣ ಕೂಡ ಒದಗಿಸಲಾಗಿದೆ.

Channelising irrigation loans through other Land Development Banks.

*Q.—371. Sri P. VENKATAGIRIYAPPA (Kolar).—

Will the Government be pleased to state :—

(*a*) whether Government have taken a decision to channelise all irrigation and other Development loans through Land Development Co-operative Bank ;

(*b*) if so, what is the action taken so far in the matter ?

*A.—Sri K. PUTTASWAMY (Minister for Co-operation and Housing).—

(*a*) Government have decided to channelise all irrigation loans through Land Development Banks.

(SRI . PUTTASWAMY)

b) 4,000 wells have been allotted for the State. Divisionwise, Districtwise distribution is made. Applications are being built up and loans have been already sanctioned in 323 cases to the tune of Rs. 12,49,930. First instalment of the loan has been disbursed in 294 cases involving a sum of Rs. 3,44,675.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗಾಗಿ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕುಗಳಿಗಾಗಿ ಹಣವನ್ನು ಯಾವ ಆಧಾರದ ಮೇಲೆ ಒದಗಿಸುತ್ತಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅಲ್ಲಿನ ಅವಶ್ಯಕತೆಗಳಿಗನುಸಾರವಾಗಿ ನೋಡಿ ಡೆಪ್ಯೂಟಿ ಕಮೀಷನರವರ ಹಂಚುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗಾಗಿ ಸಾಲಗಳನ್ನು ಹಂಚುವಾಗ ಜಿಲ್ಲಾವ್ಯೆಸು ಹಂಚುತ್ತಾರೆ. ಆದರೆ ಕೆಲವು ಜಿಲ್ಲೆಗಳಲ್ಲಿ ಕೊಟ್ಟ ಹಣ ಹಂಚಪೇ ಹಾಗೇ ರ್ಯಾಪ್ಸ್ ಆಗುತ್ತಿದೆ. ಅಂತಹ ಹಣವನ್ನು ಇತರ ಕಡೆಗಳಲ್ಲಿ ಅವಶ್ಯಕತೆಗಳು ಹೆಚ್ಚಾಗಿರುವ ಬಾವಿಗಳಿಗಾಗಿ ಹಂಚುವುದರ ಕಡೆಗೆ ಸರಕಾರ ಏಕಕ್ಕೆ ಯೋಚನೆ ಮಾಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರವನ್ನು ಪರಿಶೀಲನೆ ನಾಡುತ್ತೇನೆ.

1-00 P. M.

ಶ್ರೀ ಪಿ. ವೆಂಕಟಗಿರಿಯಪ್ಪ.—ಸೆಂಟ್ರಲ್ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕು ಮಂಜೂರು ಮಾಡಿ ರಿಕಾರ್ಡ್ ಕಳಿಸಿದರೆ ಅದನ್ನು ಇಷ್ಟು ಕಾಲದೊಳಗಾಗಿ ಪಾಸಮು ಕಳಿಸಬೇಕೆಂದೇನಾದರೂ ಕಾಲ ನಿಗದುಮಾಡಲಾಗಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಹಳೇ ಮಾತು. ಈಗ ಅರ್ಜಿ ಕೊಟ್ಟ ಎರಡು ತಿಂಗಳೊಳಗಾಗಿ ಸಾಲ ಕೊಡುವ ವ್ಯವಸ್ಥೆ ಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಜಿಯನ್ನು ಸ್ಥಳದ ಬ್ಯಾಂಕಿನವರು ಶಿಪಾರ್ಸುಮಾಡಿದ್ದಕ್ಕೆ ಮುಖ್ಯವಾಗಿ ಗಮನಕೊಡುತ್ತೀರೋ ಅಥವ ಜಿಲ್ಲಾಧಿಕಾರಿಗಳ ಶಿಪಾರ್ಸಿಗೆ ಗಮನಕೊಡುತ್ತೀರೋ?

ಶ್ರೀ ಕೆ. ಪುಟ್ಟಸ್ವಾಮಿ.—ತಾತ್ಕಾಲಿಕವಾಗಿ ಜಿಲ್ಲಾಧಿಕಾರಿಗಳು ಯಾರಿಗೆ ಸಾಲ ಕೊಡಬೇಕೆಂದು ಶಿಪಾರ್ಸುಮಾಡುತ್ತಾರೋ ಅದಕ್ಕೆ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಕಾರಣ ಈ ಯೋಜನೆಯನ್ನು ನವೆಂಬರ್ ತಿಂಗಳಿನಲ್ಲಿ ಅಭಿವೃದ್ಧಿ ಬ್ಯಾಂಕಿಗೆ ವಹಿಸಲಾಯ್ತು. ಅದುವರೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪ್ರಕಾರ ಕೆಲವು ಅರ್ಜಿಗಳು ಬಂದಿದ್ದುವು. ಆ ಅರ್ಜಿದಾರರಿಗೆ ತೊಂದರೆ ಆಗಬಾರದೆಂದು ಜಿಲ್ಲಾಧಿಕಾರಿಗಳೇ ಪರಿಶೀಲಿಸಿ ಜಮೀನು ಅಭಿವೃದ್ಧಿ ಬ್ಯಾಂಕಿಗೆ ಕಳುಹಿಸುವಂತೆ ತಿಳಿಸಲಾಗಿದೆ.

ಶ್ರೀ ಬಿ. ಗೈರಪ್ಪಾಜಿ.—ಈಗ ತಾಲ್ಲೂಕು ಬೋರ್ಡಿನವರು, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಮತ್ತು ಜಿಲ್ಲಾಧಿಕಾರಿಗಳು—ಹೀಗೆ ಮೂರು ಕಡೆಗಳಲ್ಲಿ ಸಾಲ ಮಂಜೂರು ಮಾಡುವ ಬಗ್ಗೆ ಲಸ್ಟ್ ಮಾಡುವ ವ್ಯವಸ್ಥೆ ಇರುವುದರಿಂದ ತೊಂದರೆಯಾಗಿದೆ. ಅಲ್ಲದೆ ಒಂದು ರೂಪಾಯಿ ಕಂದಾಯವಿದ್ದರೆ 300 ರೂಪಾಯಿಗಳನ್ನು ಸಾಲ ಕೊಡುತ್ತಿದ್ದಾರೆ. ಇದರಿಂದ 10 ಎಕರೆಯೊಳಗೆ ಜಮೀನಿರುವವರಿಗೆ ಸಿಗದೆ ತೊಂದರೆಯಾಗಿದೆ. ಆದುದರಿಂದ ಕಡಮೆ ಜಮೀನಿರುವವರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ 1 : 300 ಎಂದಿರುವುದನ್ನು ತಪ್ಪಿಸಿ ಬಡವರಿಗೆ ಸಾಲ ದೊರೆಯುವಂತೆ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು 2—3 ಪ್ರಶ್ನೆ ಹಾಕಿದರು, ಉತ್ತರ ಕೊಡುತ್ತೇನೆ. ಎಲ್ಲೋ ಒಂದರಡು ಕಡೆ ಜಿಲ್ಲಾಧಿಕಾರಿಗಳು ಶಿಪಾರ್ಸು ಮಾಡದಿರಬಹುದು, ಅಂಥದ್ದು ಸರಕಾರದ ಗಮನಕ್ಕೆ ಬಂದಿಲ್ಲ. ಆದರೆ ಈ ವರ್ಷಮಾತ್ರ ಜಿಲ್ಲಾಧಿಕಾರಿಗಳು ಬಂದಿರುವ ಅರ್ಜಿಗಳಿಗೆ ಅದ್ಯತೆ

ಕೊಡಬೇಕೆಂದು ತಿಳಿಸಿದೆ. ಹಾಗೆ ಮಾಡಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಕಳಿಸಬಹುದು. ಎರಡನೆಯ ಪ್ರಶ್ನೆ ಕಂದಾಯದಮೇಲೆ ಒಂದಕ್ಕೆ ಮುನ್ನೂರು ಪಟ್ಟು ಬೆಲೆ ಕಟ್ಟುವುದು. ಈಗಿರುವ ರೆಗ್ಯುಲೇಷನ್ ಪ್ರಕಾರ ಕಂದಾಯದ ಮುನ್ನೂರು ಪಟ್ಟು ಅಥವಾ ಮಾರ್ಕೆಟ್ ವ್ಯಾಲ್ಯು ಎಂದಿದೆ. ಆದರೆ ಮಾರ್ಕೆಟ್ ವ್ಯಾಲ್ಯು ಗೊತ್ತುಮಾಡಬೇಕಾದರೆ ನಿಧಾನವಾಗುತ್ತದೆ. ಅಲ್ಲದೆ ಬಾವಿಗಳಿಗಾಗುವ ಖರ್ಚಿನಲ್ಲಿ ಅರ್ಧ ಭಾಗ ಹಣ ಬಾವಿ ಕಟ್ಟುವ ಕಡೆ ಕೊಡುವುದರಿಂದ ನಣ್ಣ ಹಿಡುವಳಿಯವರಿಗೆ ತೊಂದರೆಯಾಗುವುದಿಲ್ಲ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Distribution of Foodgrains

*Q.—204. Sri B. J. LINGE GOWDA (Channapatna).—

Will the Government be pleased to state :—

(*a*) the details of foodgrains distributed in the State during the months of September, October and November, 1965 (Districtwar information may be furnished) ;

(*b*) what was the quota allotted to Channapatna Taluk during the above three months ?

A.—Sri B. D. JATTI (Minister for Food).—

(*a*) *Vide* statement 'A' appended.

(*b*) *Vide* statement 'B' appended.